ಉತ್ತರ ಕನ್ನಡ ಜಿಲ್ಲೆಯ ಸಿದ್ಧಾಪುರದ ಕಾವ್ಯಶ್ರೀ ನಾಯ್ಕ ಮನಮನೆ ಅರ್ಥಶಾಸ್ತ್ರ ವಿಷಯದಲ್ಲಿ ಧಾರವಾಡ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಕವಿತೆ ಮತ್ತು ಕಥೆಗಳನ್ನು ಬರೆಯುತ್ತ ಸಾಹಿತ್ಯ ಲೋಕದಲ್ಲಿ ಹೆಜ್ಜೆಯೂರುತ್ತಿರುವವರು. ಬರವಣಿಗೆಯ ಜೊತೆಗೆ ಫೋಟೊಗ್ರಫಿ ಅವರ ಮತ್ತೊಂದು ಆಸಕ್ತಿ. ಹೊನ್ನಾವರದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಅರ್ಥಶಾಸ್ತ್ರ ಉಪನ್ಯಾಸಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಮೈದುನನಿಂದ ಬಸಿರಾಗುತ್ತಾಳೆ. ಅವಳ ಬಸಿರಿನ ಸುದ್ದಿ ಹರಡುತ್ತಲೆ ಪುನಃ ಒಟ್ಟಾಗುವ ಸಂಪ್ರದಾಯಸ್ಥರು ಅವಳನ್ನು ತವರು ಮನೆಗಟ್ಟಲು ಪ್ರಯತ್ನಿಸುತ್ತಾರೆ. ಅಂಜದ ಆಕೆ ತನ್ನ ಅತ್ತೆಗೆ ಹೇಳುತ್ತಾಳೆ: 'ನಿಮ್ಮ ಮಗನೇ, ಬಸಿರು ತುಂಬಿದವರು. ನಾ ಯಾಕೆ ತವರಿಗೆ ಹೋಗಲಿ. ನೀವೇ ಬಾಣಂತನ ಮಾಡಿ. ಆ ಮಗನ ಬದ್ಲಿಗೆ ಈ ಮಗ. ಅಷ್ಟೇ ಸೈಯಲ್ಲ.' ಸ್ವಾಮಿಗಳಿಗೆ ಸುದ್ದಿ ತಿಳಿಸಿ ಮಠದಿಂದ ಬಹಿಷ್ಕಾರ ಹಾಕಿಸುತ್ತೇನೆ ಎಂದು ಹಲವರು ನಿಂತಾಗ, ಅದಕ್ಕೂ ದಾಕ್ಷಾಯಿಣಿಯಲ್ಲಿ ಪರಿಹಾರವಿದೆ. "ನಡೀರಿ ನಾನು ಬರ್ತೀನಿ. ಸ್ವಾಮಿಗಳ ಎದುರಿಗೆ ನೀವು ಮಾಡಿದ್ದೆಲ್ಲ ಹೇಳ್ತೀನಿ. ನಿಮ್ಮನ್ನೆಲ್ಲ ಮನೆಯಿಂದ ಅಟ್ಟಿ ನಾನೊಬ್ಬಳೇ ಇರ್ತೀನಿ. ಏನ್ ಮಾಡ್ತೀರಾ ಹೊಲೆಯರನ್ನೆಲ್ಲ ಮನೆಗೆ ಕರ್ಕೊಂಡ್ ಬರ್ತೀನಿ." ಎಂದು ಸೆಟೆದು ನಿಲ್ಲುತ್ತಾಳೆ. ಬ್ರಾಹ್ಮಣರ ಮನೆಗೆ ಹೊಲೆಯರನ್ನು ಸೇರಿಸುವುದೇ... ಎಂದು ಯೋಚಿಸುತ್ತ, ಈ ದಾಕ್ಷಾಯಿಣಿಗೆ ಹುಚ್ಚು ಹಿಡಿದಿರಬೇಕೆಂದು ಎಣಿಸುವ ಹಿರಿಯರ ಗಡಣ, ಬಹಿಷ್ಕಾರದ ಯೋಚನೆಯನ್ನೇ ಕೈಬಿಡುತ್ತಾರೆ.

ಹಾಗೆಂದು ದಾಕ್ಷಾಯಿಣಿಯ ಮುಂದಿನ ಬದುಕು ಸರಳವಾದುದು ಎಂದೇನೂ ಅರ್ಥವಲ್ಲ. ಅದೂ ಸವಾಲಿನದೇ. ಅಘೋಷಿತ ಬಹಿಷ್ಕಾರದ ಏಕಾಂಗಿ ಬದುಕಾಗಿರಲೂ ಸಾಕು. ಆದರೂ ಅವಳಿಚ್ಛೆಯ ಬದುಕದು. 'ಮಡಿ'ಮಾಡಿಸಿಕೊಂಡ ನಂತರವೂ ಉದ್ದಕ್ಕೆ ಕೂದಲು ಬೆಳೆಸಿಕೊಂಡ ಅವಳಿಗೆ ಕೂದಲು ಕತ್ತರಿಸುವಂತೆ ಕ್ಷೌರಿಕನನ್ನು ಕರೆತರುತ್ತಾರೆ. ಆಗ ಅತ್ತೆಯನ್ನು ದರದರನೆ ಎಳೆದುಕೊಂಡು ಅವನಲ್ಲಿಗೆ ಹೋಗುವ ಅವಳು, ಅತ್ತೆಯ ತಲೆ ಬೋಳಿಸುವಂತೆ ಕ್ಷೌರಿಕನಿಗೆ ಹೇಳುವಳು. ಇವಳ ಅಪರಾತಪರಾಗಳನ್ನು ತಿಳಿದಿದ್ದ ಕ್ಷೌರಿಕ ಅಲ್ಲಿಂದ ಓಡಿಹೋಗುತ್ತಾನೆ.

ದಾಕ್ಷಾಯಣಿಯ ಈ ನಡೆ, ಆ ಕಾಲದಲ್ಲಿ ವಿಧವೆಯರನ್ನು ನಡೆಸಿಕೊಳ್ಳುವ ರೀತಿಯ ಕುರಿತು ಭಾರೀ ಚರ್ಚೆಯನ್ನೂ ಹುಟ್ಟು ಹಾಕುತ್ತದೆ. ಸ್ವತಃ ಬಾಲವಿಧವೆಯಾಗಿ ತಪಸ್ವಿನಿಯ ಬದುಕನ್ನು ಅನಿವಾರ್ಯವಾಗಿ ಒಪ್ಪಿಕೊಳ್ಳುವ ಫಣಿಯಮ್ಮ ದಾಕ್ಷಾಯಿಣಿಗೆ ಮಡಿ ಮಾಡುವುದನ್ನು ವಿರೋಧಿಸುತ್ತಾರೆ. ಕಾದಂಬರಿಯ ಕಿಟ್ಟಪ್ಪ ಪೇಟೆಯಲ್ಲಿದ್ದುಕೊಂಡು ಶಾನುಭೋಗಿಕೆ ಮಾಡುವವರು. ದಾಕ್ಷಾಯಿಣಿಯ ಕುರಿತು ಭಟ್ಟಯ್ಯ ಆರೋಪ ಮಾಡಿದಾಗ ಅವರೂ ದಾಕ್ಷಾಯಿಣಿಯ ನಡೆಯನ್ನು ಸಮರ್ಥಿಸುವರು.

ಕನ್ನಡ ಸಾಹಿತ್ಯ ಲೋಕದಲ್ಲಿ ಈ ರೀತಿ ರೂಢಿಗತ ಸಮಾಜ ವ್ಯವಸ್ಥೆಯ ವಿರುದ್ಧ ಬದುಕಿದ ಪಾತ್ರಗಳು ಹಲವಾರಿವೆ. ಕುವೆಂಪು ಅವರ ಕಾನೂರು ಹೆಗ್ಗಡತಿಯ ಸುಬ್ಬಮ್ಮ, ಘಟಶ್ರಾದ್ಧದ ಯಮುನಕ್ಕ ಹೀಗೆ. ವೈಧವ್ಯದ ನಂತರ ಲೈಂಗಿಕತೆಯನ್ನು ನಿಭಾಯಿಸಲಾಗದೆ ದುರಂತ ಅಂತ್ಯ ಕಾಣುವ ಹಲವು ಪಾತ್ರಗಳ ನಡುವೆ ದಾಕ್ಷಾಯಣಿಯ ಪಾತ್ರ ವಿಶಿಷ್ಟವಾದದ್ದು. ಸಾಂಪ್ರದಾಯಿಕ ಕಟ್ಟಳೆಯನ್ನು ಆರಂಭದಲ್ಲಿ ಒಪ್ಪಿಕೊಂಡಂತೆ, ರೂಢಿಗತ ರಿವಾಜಿಗೆ ಪಕ್ಕಾದಂತೆ ಆರಂಭದಲ್ಲಿ ಅನಿಸಿದರೂ ಕೊನೆಗೂ ಆಕೆ ಮಾಡುವುದು ತನ್ನ ಮನಸಿಗೆ ಒಪ್ಪಿತವಾದುದನ್ನೆ. ವೈಧವ್ಯದ ನಂತರ 'ಮಡಿ' ಮಾಡಿಸಿಕೊಂಡು ಅನ್ನ ಹಾಕಿದ ಋಣಕ್ಕಾಗಿ ಆ ಕುಟುಂಬಕ್ಕೆ ಜೀವ ತೇಯುವ ಬದಲು ದಾಕ್ಷಾಯಿಣಿ ಆಗಿನ ಕಾಲದಲ್ಲಿ ವಿಧವೆಯರ ಪಾಲಿಗೆ ಅಲಭ್ಯವಾಗಿದ್ದ ಗಂಡಿನ ಸಾಂಗತ್ಯ, ಕುಟುಂಬ, ಮಗು, ಮನೆ ಎಲ್ಲವನ್ನೂ ಪಡೆಯುತ್ತಾಳೆ. ಸಾಂಪ್ರದಾಯಿಕ ಸಮಾಜದ ಕಾಲರುಪಟ್ಟಿ ಹಿಡಿದು ಕಪಾಳಕ್ಕೆರಡು ಬಾರಿಸಿ ತನ್ನಿಷ್ಟದ ಬದುಕು ಕಟ್ಟಿಕೊಂಡ ಕಾರಣಕ್ಕಾಗಿಯೇ ದಾಕ್ಷಾಯಣಿ ಪಾತ್ರ ನನಗೆ ಯಾವಾಗಲೂ ಅಚ್ಚುಮೆಚ್ಚು. ●